ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೧೪, ಮೇ, ೨೦೨೬ (ವೈಶಾಖ, ೨೪, ಶಕವರ್ಷ, ೧೯೪೮)	ಸಂಚಿಕೆ ೯೦
Volume - 161	BENGALURU, THURSDAY, 14, MAY, 2026 (VAISHAKHA , 24, SHAKAVARSHA, 1948)	Issue 90

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ತಾತ್ಕಾಲಿಕವಾಗಿ ಶೇ 17 ರಿಂದ ಶೇ15ಕ್ಕೆ ಸೀಮಿತಗೊಳಿಸಿ ಒಳಮೀಸಲಾತಿ ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995
2. ಮಾನ್ಯ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 200448/2025, 17968/2025 ಮತ್ತು 3145/2023ರಲ್ಲಿ ದಿನಾಂಕ 27.11.2025ರಂದು ನೀಡಿರುವ ಮಧ್ಯಂತರ ಆದೇಶ.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2026, ದಿನಾಂಕ 27.02.2026
4. ಸರ್ಕಾರದ ಆದೇಶ ಸಂಖ್ಯೆ: ಸಕಇ 515 ಪಕವಿ 2026, ದಿನಾಂಕ 08.05.2026

ಪ್ರಸ್ತಾವನೆ:

1. ಮೇಲೆ (3)ರಲ್ಲಿ ಓದಲಾದ ದಿನಾಂಕ 27.02.2026ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ

ಸರ್ಕಾರದ ಮುಂದಿನ ಆದೇಶದವರೆಗೆ, ದಿನಾಂಕ 27.11.2025ರ ನಂತರದಲ್ಲಿ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995ರನ್ವಯ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ) ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸುವಂತೆ ಎಲ್ಲಾ ನೇಮಕಾತಿ/ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ.

2. ದಿನಾಂಕ 30.04.2026ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಿದಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಮೇಲೆ (4)ರಲ್ಲಿ ಓದಲಾದ ದಿನಾಂಕ 08.05.2026ರ ಸರ್ಕಾರಿ ಆದೇಶವನ್ನು ಈ ಕೆಳಕಂಡಂತೆ ಹೊರಡಿಸಲಾಗಿರುತ್ತದೆ.

I. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 200448/2025ರಲ್ಲಿ ನೀಡಿರುವ ಮಧ್ಯಂತರ ಆದೇಶದ ಹಿನ್ನಲೆಯಲ್ಲಿ, ಈಗಾಗಲೇ ದಿನಾಂಕ:26.02.2026ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ದಿನಾಂಕ:20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995ರನ್ವಯ 50% ಮೀಸಲಾತಿ ಪ್ರಮಾಣವನ್ನು ತಾತ್ಕಾಲಿಕವಾಗಿ ಅಳವಡಿಸಿಕೊಂಡು, ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು, ನೇಮಕಾತಿ ಮುಂದುವರೆಸಲು ನಿರ್ಧರಿಸಿರುವುದರಿಂದ, ಅದರಂತೆ ನೇಮಕಾತಿ ಹಾಗೂ ಪ್ರವೇಶಾತಿಗಳಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಶೇಕಡಾ 15 ಮೀಸಲಾತಿಯಲ್ಲಿ ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿ ಗಳಿಗೆ ಒಳಮೀಸಲಾತಿಯನ್ನು ಕ್ರಮವಾಗಿ 5.25, 5.25, 4.5 ಪ್ರಮಾಣದಲ್ಲಿ ಅನುಷ್ಠಾನಗೊಳಿಸತಕ್ಕದ್ದು. ಪ್ರವರ್ಗ-ಸಿ ಗೆ ಲಭ್ಯವಾಗುವ ಹುದ್ದೆಗಳಲ್ಲಿ/ಪ್ರವೇಶಾತಿ ಸೀಟುಗಳಲ್ಲಿ ಶೇಕಡಾ 20ರಷ್ಟು ಹುದ್ದೆಗಳನ್ನು/ಪ್ರವೇಶಾತಿ ಸೀಟುಗಳನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳೀಗೆ ಮೀಸಲಿರಿಸುವುದು. ಒಂದು ವೇಳೆ, ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಬ್ಯವಾಗದಿದ್ದಲ್ಲಿ, ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ "ಸಿ" ಯ ಇತರೆ ಜಾತಿಗಳಿಗೆ ಲಭ್ಯಗೊಳಿಸತಕ್ಕದ್ದು;

II. ಮೇಲ್ಕಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು 400 ಬಿಂದುಗಳ ವರ್ತುಲಗಳನ್ನು ಅನುಪಾಲಿಸತಕ್ಕದ್ದು;

III. ಯಾವುದೇ ನೇಮಕಾತಿ ಅಧಿಸೂಚನೆಯಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದಲ್ಲಿ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಎಲ್ಲಾ 101 ಪರಿಶಿಷ್ಟ ಜಾತಿಗಳಿಗೆ ಸ್ಪರ್ಧಿಸಲು ಅವಕಾಶ ನೀಡುವುದು;

IV. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2025 ದಿನಾಂಕ:03.09.2025ರನ್ವಯ ಪರಿಶಿಷ್ಟ ಜಾತಿಗೆ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿರುವ ಅಧಿಸೂಚನೆಗಳನ್ನು ಹೊರತುಪಡಿಸಿ ಇನ್ನುಳಿದ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು, ಮೇಲಿನ ತೀರ್ಮಾನಗಳಂತೆ ಪರಿಷ್ಕೃತ ಅಧಿಸೂಚನೆಗಳನ್ನು ಹೊರಡಿಸುವುದು. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026 ದಿನಾಂಕ:27.02.2026 ರಂತೆ ಒಳಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು,

ಮೇಲಿನ ತೀರ್ಮಾನ (1) ರಂತೆ ಒಳಮೀಸಲಾತಿ ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆಗಳನ್ನು ಕೂಡಲೇ ಹೊರಡಿಸಿ, ನೇಮಕಾತಿಗಳನ್ನು ಮಾಡುವುದು;

V. ಮುಂದೆ ಮಾನ್ಯ ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹೆಚ್ಚಿಸಿರುವ ಶೇಕಡಾ 24ರಷ್ಟು ಮೀಸಲಾತಿ ಪ್ರಮಾಣವನ್ನು ಒಪ್ಪಿದಲ್ಲಿ, ಶೇಕಡಾ 6 ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡುವುದು;

VI. ಮೇಲೆ ನಿರ್ಧರಿಸಿದಂತೆ, ಈಗಾಗಲೇ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗಾಗಿ ತುರ್ತು ಕ್ರಮಗಳನ್ನು ಕೈಗೊಳ್ಳಲು ಸಚಿವ ಸಂಪುಟವು ತೀರ್ಮಾನಿಸಿತು;

VII. ದಿನಾಂಕ 24.04.2026ರ ಸಚಿವ ಸಂಪುಟದ ನಿರ್ಣಯದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ 27.04.2026ನ್ನು ಹಿಂಪಡೆದು, ಮೇಲಿನ ಮಾರ್ಪಡಿಸಿದ ನಿರ್ಣಯದಂತೆ ಸೂಕ್ತ ಆದೇಶವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸುವುದು. ಸದರಿ ಆದೇಶದಂತೆ, ಸಿಆಸು ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಯ ಸಮಾಲೋಚನೆಯೊಂದಿಗೆ ಸೂಕ್ತ 400 ಬಿಂದುಗಳ ರೋಸ್ಟರ್ ಅನ್ನು ಹೊರಡಿಸುವುದು.

3. ಅದರಂತೆ 400 ಬಿಂದುಗಳ ರೋಸ್ಟರನ್ನು ಹೊರಡಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026,

ಬೆಂಗಳೂರು, ದಿನಾಂಕ: 13.05.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ 08.05.2026 ರಂದು ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 515 ಪಕವಿ 2026 ರಂತೆ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ ಅನುಸರಿಸಬೇಕಾದ 400 ಬಿಂದುಗಳ ರೋಸ್ಟರನ್ನು ಅನುಬಂಧ-1ರಲ್ಲಿರಿಸಿದೆ. ವಿವಿಧ ನೇಮಕಾತಿ / ಆಯ್ಕೆ ಪ್ರಾಧಿಕಾರಗಳು ನೇರ ನೇಮಕಾತಿ ಸಂದರ್ಭದಲ್ಲಿ ಈ ಕೆಳಕಂಡಂತೆ ಕ್ರಮವಹಿಸುವುದು.

1. 400 ಬಿಂದುಗಳ ರೋಸ್ಟರ್‌ನಲ್ಲಿ ಪರಿಶಿಷ್ಟ ಜಾತಿಯ ಯಾವುದೇ ಪ್ರವರ್ಗಗಳನ್ನು (ಪ್ರವರ್ಗ-ಎ, ಬಿ ಮತ್ತು ಸಿ) ನಮೂದಿಸದೇ ತಯಾರಿಸಲಾಗಿದೆ. ಹಿಂದಿನ ನೇರ ನೇಮಕಾತಿಯು ಯಾವ ಬಿಂದುವಿನವರೆಗೆ ಆಗಿರುತ್ತದೆಯೋ ಅದರ ನಂತರದ ಬಿಂದುವಿನಿಂದ ಹೊಸ ನೇಮಕಾತಿಯನ್ನು ಪ್ರಾರಂಭಿಸುವುದು. ಇದೇ ಪದ್ಧತಿಯನ್ನು ಸಮತಳ ಮೀಸಲಾತಿಗೂ ಅನುಸರಿಸುವುದು.
2. ನೇಮಕಾತಿ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿಗೆ 3 ಕ್ಕಿಂತ ಕಡಿಮೆ ಹುದ್ದೆಗಳು ಲಭ್ಯವಾಗುತ್ತಿದ್ದಲ್ಲಿ ಎಲ್ಲಾ 101 ಪರಿಶಿಷ್ಟ ಜಾತಿಗಳಿಗೆ ಅವಕಾಶ ನೀಡಬೇಕಾಗಿರುವುದರಿಂದ ಲಗತ್ತಿಸಿರುವ 400 ರೋಸ್ಟರ್ ಬಿಂದುಗಳನ್ನು ಯಥಾವತ್ತಾಗಿ ಅನುಸರಿಸುವುದು. ಸಮತಳ ಮೀಸಲಾತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2023, ದಿನಾಂಕ: 08-

03-2023 ರಂತೆ ಅನುಸರಿಸುವುದು. ಈ ಸಂದರ್ಭದಲ್ಲಿ ಸಮತಳ ಮೀಸಲಾತಿಯು ಹಿಂದಿನ ನೇಮಕಾತಿಯಲ್ಲಿ ಯಾವ ಬಿಂದುವಿನಲ್ಲಿ ಅಂತಿಮಗೊಂಡಿರುತ್ತದೆಯೋ ಆ ಬಿಂದುವಿನ ನಂತರದ ಬಿಂದುವಿನಿಂದ ನೇಮಕಾತಿಯನ್ನು ಪ್ರಾರಂಭಿಸುವುದು.

3. ನೇಮಕಾತಿ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿಗೆ 3 ಕ್ಕಿಂತ ಹೆಚ್ಚು ಹುದ್ದೆಗಳು ಲಭ್ಯವಾದಲ್ಲಿ ಒಳ ಮೀಸಲಾತಿ ಅನ್ವಯಿಸಬೇಕಾಗಿರುವುದರಿಂದ,

- **ಮೊದಲನೆಯದಾಗಿ;** ಅನುಬಂಧ-1ರಲ್ಲಿ ಲಗತ್ತಿಸಿರುವ 400 ಬಿಂದುಗಳ ರೋಸ್ಟರ್‌ನ್ನು ಯಥಾವತ್ತಾಗಿ ನಿರ್ವಹಿಸುವುದು.
- **ಎರಡನೇಯದಾಗಿ;** ಪರಿಶಿಷ್ಟ ಜಾತಿಯ ವಿವಿಧ ಪ್ರವರ್ಗಗಳಿಗೆ 5.25, 5.25, 4.5 ಪ್ರಮಾಣದಲ್ಲಿ ತಯಾರಿಸಿರುವ **ಅನುಬಂಧ-2ರ** (400 ರೋಸ್ಟರ್ ಬಿಂದುಗಳಲ್ಲಿ ಮೀಸಲಾತಿ ಪ್ರಮಾಣ ಶೇ.15% ರಂತೆ) 60 ಬಿಂದುಗಳ ರೋಸ್ಟರ್ ರಂತೆ ಒಳಮೀಸಲಾತಿ ಅನುಸರಿಸಿ ಪ್ರತ್ಯೇಕವಾಗಿ ರೋಸ್ಟರನ್ನು ನಿರ್ವಹಿಸುವುದು.
- **ಮೂರನೇಯದಾಗಿ;** ಪ್ರವರ್ಗ-ಸಿಗೆ ಲಭ್ಯವಾಗುವ ಹುದ್ದೆಗಳಲ್ಲಿ ಶೇಕಡ 20 ರಷ್ಟು ಹುದ್ದೆಗಳನ್ನು 59 ಅತ್ಯಂತ ಹಿಂದುಳಿದ ಜಾತಿಯವರಿಗೆ ಮೀಸಲಿರಿಸಬೇಕಾಗಿರುವುದರಿಂದ **ಅನುಬಂಧ-2** ರಂತೆ ಗುರುತಿಸಲಾಗಿರುವ ಒಳ ಮೀಸಲಾತಿ **ಬಿಂದು ಸಂಖ್ಯೆ 3, 20, 37, 54 ಗಳನ್ನು** ಕಡ್ಡಾಯವಾಗಿ, ಈ 59 ಜಾತಿಗಳಿಗೆ ಮೀಸಲಿರಿಸುವುದು. ಒಂದು ವೇಳೆ ಸದರಿ 59 ಜಾತಿಗಳಲ್ಲಿ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಆ ಹುದ್ದೆಗಳನ್ನು ಪ್ರವರ್ಗ –ಸಿ ರಲ್ಲಿನ ಇತರೆ ಜಾತಿಗಳಿಗೆ ನೀಡುವುದು.
- ಪರಿಶಿಷ್ಟ ಜಾತಿಯ ಪ್ರವರ್ಗ –ಎ, ಪ್ರವರ್ಗ-ಬಿ ಮತ್ತು ಪ್ರವರ್ಗ–ಸಿ ಗೆ **ಪ್ರವರ್ಗವಾರು ಪ್ರತ್ಯೇಕವಾಗಿ** ಸಮತಳ ಮೀಸಲಾತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2023, ದಿನಾಂಕ: 08-03-2023 ರಂತೆ ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಆಶಾ ಕುಮಾರಿ ಎ. ಜೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1)

ಅನುಬಂಧ-1

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ನೇರ ನೇಮಕಾತಿಯಲ್ಲಿ Vertical Reservation (400 Roster points)

01	ಪ.ಜಾತಿ	26	ಸಾ.ಅ.	51	II(ಎ)	76	ಸಾ.ಅ.
02	ಸಾ.ಅ.	27	ಪ.ಜಾತಿ	52	ಸಾ.ಅ.	77	II(ಎ)
03	ಪ.ಪಂ	28	ಸಾ.ಅ.	53	ಪ.ಜಾತಿ	78	ಸಾ.ಅ.
04	ಸಾ.ಅ.	29	II(ಎ)	54	ಸಾ.ಅ.	79	ಪ್ರವರ್ಗ - I
05	ಪ್ರವರ್ಗ - I	30	ಸಾ.ಅ.	55	II(ಎ)	80	ಸಾ.ಅ.
06	ಸಾ.ಅ.	31	ಪ್ರವರ್ಗ - I	56	ಸಾ.ಅ.	81	ಪ.ಜಾತಿ
07	II(ಎ)	32	ಸಾ.ಅ	57	ಪ್ರವರ್ಗ - I	82	ಸಾ.ಅ.
08	ಸಾ.ಅ.	33	ಪ.ಜಾತಿ	58	ಸಾ.ಅ.	83	III(ಬಿ)
09	ಪ.ಜಾತಿ	34	ಸಾ.ಅ.	59	ಪ.ಜಾತಿ	84	ಸಾ.ಅ.
10	ಸಾ.ಅ.	35	II(ಬಿ)	60	ಸಾ.ಅ.	85	II(ಎ)
11	II(ಬಿ)	36	ಸಾ.ಅ.	61	II(ಬಿ)	86	ಸಾ.ಅ.
12	ಸಾ.ಅ.	37	II(ಎ)	62	ಸಾ.ಅ	87	II(ಬಿ)
13	II(ಎ)	38	ಸಾ.ಅ.	63	II(ಎ)	88	ಸಾ.ಅ.
14	ಸಾ.ಅ.	39	ಪ.ಪಂ	64	ಸಾ.ಅ.	89	ಪ.ಜಾತಿ
15	ಪ.ಜಾತಿ	40	ಸಾ.ಅ.	65	III(ಬಿ)	90	ಸಾ.ಅ.
16	ಸಾ.ಅ.	41	ಪ.ಜಾತಿ	66	ಸಾ.ಅ.	91	II(ಎ)
17	III(ಎ)	42	ಸಾ.ಅ.	67	ಪ.ಜಾತಿ	92	ಸಾ.ಅ.
18	ಸಾ.ಅ.	43	III(ಬಿ)	68	ಸಾ.ಅ.	93	ಪ.ಜಾತಿ
19	III(ಬಿ)	44	ಸಾ.ಅ.	69	II(ಎ)	94	ಸಾ.ಅ.
20	ಸಾ.ಅ.	45	II(ಎ)	70	ಸಾ.ಅ.	95	III(ಎ)
21	II(ಎ)	46	ಸಾ.ಅ	71	ಪ.ಪಂ	96	ಸಾ.ಅ.
22	ಸಾ.ಅ.	47	III(ಎ)	72	ಸಾ.ಅ.	97	II(ಎ)
23	ಪ.ಜಾತಿ	48	ಸಾ.ಅ.	73	III(ಎ)	98	ಸಾ.ಅ.
24	ಸಾ.ಅ.	49	ಪ.ಜಾತಿ	74	ಸಾ.ಅ.	99	III(ಬಿ)
25	II(ಎ)	50	ಸಾ.ಅ.	75	ಪ.ಜಾತಿ	100	ಸಾ.ಅ.

101	ಪ.ಜಾತಿ	126	ಸಾ.ಅ.	151	II(ಎ)	176	ಸಾ.ಅ.
102	ಸಾ.ಅ.	127	ಪ.ಜಾತಿ	152	ಸಾ.ಅ.	177	II(ಎ)
103	ಪ.ಪಂ	128	ಸಾ.ಅ.	153	ಪ.ಜಾತಿ	178	ಸಾ.ಅ.
104	ಸಾ.ಅ.	129	II(ಎ)	154	ಸಾ.ಅ.	179	ಪ್ರವರ್ಗ - I
105	ಪ್ರವರ್ಗ - I	130	ಸಾ.ಅ.	155	II(ಎ)	180	ಸಾ.ಅ.
106	ಸಾ.ಅ.	131	ಪ್ರವರ್ಗ - I	156	ಸಾ.ಅ.	181	ಪ.ಜಾತಿ
107	II(ಎ)	132	ಸಾ.ಅ	157	ಪ್ರವರ್ಗ - I	182	ಸಾ.ಅ.
108	ಸಾ.ಅ.	133	ಪ.ಜಾತಿ	158	ಸಾ.ಅ.	183	III(ಬಿ)
109	ಪ.ಜಾತಿ	134	ಸಾ.ಅ.	159	ಪ.ಜಾತಿ	184	ಸಾ.ಅ.
110	ಸಾ.ಅ.	135	II(ಬಿ)	160	ಸಾ.ಅ.	185	II(ಎ)
111	II(ಬಿ)	136	ಸಾ.ಅ.	161	II(ಬಿ)	186	ಸಾ.ಅ.
112	ಸಾ.ಅ.	137	II(ಎ)	162	ಸಾ.ಅ	187	II(ಬಿ)
113	II(ಎ)	138	ಸಾ.ಅ.	163	II(ಎ)	188	ಸಾ.ಅ.
114	ಸಾ.ಅ.	139	ಪ.ಪಂ	164	ಸಾ.ಅ.	189	ಪ.ಜಾತಿ
115	ಪ.ಜಾತಿ	140	ಸಾ.ಅ.	165	III(ಬಿ)	190	ಸಾ.ಅ.
116	ಸಾ.ಅ.	141	ಪ.ಜಾತಿ	166	ಸಾ.ಅ.	191	II(ಎ)
117	III(ಎ)	142	ಸಾ.ಅ.	167	ಪ.ಜಾತಿ	192	ಸಾ.ಅ.
118	ಸಾ.ಅ.	143	III(ಬಿ)	168	ಸಾ.ಅ.	193	ಪ.ಜಾತಿ
119	III(ಬಿ)	144	ಸಾ.ಅ.	169	II(ಎ)	194	ಸಾ.ಅ.
120	ಸಾ.ಅ.	145	II(ಎ)	170	ಸಾ.ಅ.	195	III(ಎ)
121	II(ಎ)	146	ಸಾ.ಅ	171	ಪ.ಪಂ	196	ಸಾ.ಅ.
122	ಸಾ.ಅ.	147	III(ಎ)	172	ಸಾ.ಅ.	197	II(ಎ)
123	ಪ.ಜಾತಿ	148	ಸಾ.ಅ.	173	III(ಎ)	198	ಸಾ.ಅ.
124	ಸಾ.ಅ.	149	ಪ.ಜಾತಿ	174	ಸಾ.ಅ.	199	III(ಬಿ)
125	II(ಎ)	150	ಸಾ.ಅ.	175	ಪ.ಜಾತಿ	200	ಸಾ.ಅ.

201	ಪ.ಜಾತಿ	226	ಸಾ.ಅ.	251	II(ಎ)	276	ಸಾ.ಅ.
202	ಸಾ.ಅ.	227	ಪ.ಜಾತಿ	252	ಸಾ.ಅ.	277	II(ಎ)
203	ಪ.ಪಂ	228	ಸಾ.ಅ.	253	ಪ.ಜಾತಿ	278	ಸಾ.ಅ.
204	ಸಾ.ಅ.	229	II(ಎ)	254	ಸಾ.ಅ.	279	ಪ್ರವರ್ಗ - I
205	ಪ್ರವರ್ಗ - I	230	ಸಾ.ಅ.	255	II(ಎ)	280	ಸಾ.ಅ.
206	ಸಾ.ಅ.	231	ಪ್ರವರ್ಗ - I	256	ಸಾ.ಅ.	281	ಪ.ಜಾತಿ
207	II(ಎ)	232	ಸಾ.ಅ	257	ಪ್ರವರ್ಗ - I	282	ಸಾ.ಅ.
208	ಸಾ.ಅ.	233	ಪ.ಜಾತಿ	258	ಸಾ.ಅ.	283	III(ಬಿ)
209	ಪ.ಜಾತಿ	234	ಸಾ.ಅ.	259	ಪ.ಜಾತಿ	284	ಸಾ.ಅ.
210	ಸಾ.ಅ.	235	II(ಬಿ)	260	ಸಾ.ಅ.	285	II(ಎ)
211	II(ಬಿ)	236	ಸಾ.ಅ.	261	II(ಬಿ)	286	ಸಾ.ಅ.
212	ಸಾ.ಅ.	237	II(ಎ)	262	ಸಾ.ಅ	287	II(ಬಿ)
213	II(ಎ)	238	ಸಾ.ಅ.	263	II(ಎ)	288	ಸಾ.ಅ.
214	ಸಾ.ಅ.	239	ಪ.ಪಂ	264	ಸಾ.ಅ.	289	ಪ.ಜಾತಿ
215	ಪ.ಜಾತಿ	240	ಸಾ.ಅ.	265	III(ಬಿ)	290	ಸಾ.ಅ.
216	ಸಾ.ಅ.	241	ಪ.ಜಾತಿ	266	ಸಾ.ಅ.	291	II(ಎ)
217	III(ಎ)	242	ಸಾ.ಅ.	267	ಪ.ಜಾತಿ	292	ಸಾ.ಅ.
218	ಸಾ.ಅ.	243	III(ಬಿ)	268	ಸಾ.ಅ.	293	ಪ.ಜಾತಿ
219	III(ಬಿ)	244	ಸಾ.ಅ.	269	II(ಎ)	294	ಸಾ.ಅ.
220	ಸಾ.ಅ.	245	II(ಎ)	270	ಸಾ.ಅ.	295	III(ಎ)
221	II(ಎ)	246	ಸಾ.ಅ	271	ಪ.ಪಂ	296	ಸಾ.ಅ.
222	ಸಾ.ಅ.	247	III(ಎ)	272	ಸಾ.ಅ.	297	II(ಎ)
223	ಪ.ಜಾತಿ	248	ಸಾ.ಅ.	273	III(ಎ)	298	ಸಾ.ಅ.
224	ಸಾ.ಅ.	249	ಪ.ಜಾತಿ	274	ಸಾ.ಅ.	299	III(ಬಿ)
225	II(ಎ)	250	ಸಾ.ಅ.	275	ಪ.ಜಾತಿ	300	ಸಾ.ಅ.

301	ಪ.ಜಾತಿ	326	ಸಾ.ಅ.	351	II(ಎ)	376	ಸಾ.ಅ.
302	ಸಾ.ಅ.	327	ಪ.ಜಾತಿ	352	ಸಾ.ಅ.	377	II(ಎ)
303	ಪ.ಪಂ	328	ಸಾ.ಅ.	353	ಪ.ಜಾತಿ	378	ಸಾ.ಅ.
304	ಸಾ.ಅ.	329	II(ಎ)	354	ಸಾ.ಅ.	379	ಪ್ರವರ್ಗ - I
305	ಪ್ರವರ್ಗ - I	330	ಸಾ.ಅ.	355	II(ಎ)	380	ಸಾ.ಅ.
306	ಸಾ.ಅ.	331	ಪ್ರವರ್ಗ - I	356	ಸಾ.ಅ.	381	ಪ.ಜಾತಿ
307	II(ಎ)	332	ಸಾ.ಅ	357	ಪ್ರವರ್ಗ - I	382	ಸಾ.ಅ.
308	ಸಾ.ಅ.	333	ಪ.ಜಾತಿ	358	ಸಾ.ಅ.	383	III(ಬಿ)
309	ಪ.ಜಾತಿ	334	ಸಾ.ಅ.	359	ಪ.ಜಾತಿ	384	ಸಾ.ಅ.
310	ಸಾ.ಅ.	335	II(ಬಿ)	360	ಸಾ.ಅ.	385	II(ಎ)
311	II(ಬಿ)	336	ಸಾ.ಅ.	361	II(ಬಿ)	386	ಸಾ.ಅ.
312	ಸಾ.ಅ.	337	II(ಎ)	362	ಸಾ.ಅ	387	II(ಬಿ)
313	II(ಎ)	338	ಸಾ.ಅ.	363	II(ಎ)	388	ಸಾ.ಅ.
314	ಸಾ.ಅ.	339	ಪ.ಪಂ	364	ಸಾ.ಅ.	389	ಪ.ಜಾತಿ
315	ಪ.ಜಾತಿ	340	ಸಾ.ಅ.	365	III(ಬಿ)	390	ಸಾ.ಅ.
316	ಸಾ.ಅ.	341	ಪ.ಜಾತಿ	366	ಸಾ.ಅ.	391	II(ಎ)
317	III(ಎ)	342	ಸಾ.ಅ.	367	ಪ.ಜಾತಿ	392	ಸಾ.ಅ.
318	ಸಾ.ಅ.	343	III(ಬಿ)	368	ಸಾ.ಅ.	393	ಪ.ಜಾತಿ
319	III(ಬಿ)	344	ಸಾ.ಅ.	369	II(ಎ)	394	ಸಾ.ಅ.
320	ಸಾ.ಅ.	345	II(ಎ)	370	ಸಾ.ಅ.	395	III(ಎ)
321	II(ಎ)	346	ಸಾ.ಅ	371	ಪ.ಪಂ	396	ಸಾ.ಅ.
322	ಸಾ.ಅ.	347	III(ಎ)	372	ಸಾ.ಅ.	397	II(ಎ)
323	ಪ.ಜಾತಿ	348	ಸಾ.ಅ.	373	III(ಎ)	398	ಸಾ.ಅ.
324	ಸಾ.ಅ.	349	ಪ.ಜಾತಿ	374	ಸಾ.ಅ.	399	III(ಬಿ)
325	II(ಎ)	350	ಸಾ.ಅ.	375	ಪ.ಜಾತಿ	400	ಸಾ.ಅ.

400 ರೋಸ್ಟರ್ ಬಿಂದುಗಳಲ್ಲಿ ಪ.ಜಾತಿಗೆ ಲಭ್ಯವಾಗುವ ಬಿಂದುಗಳು	ಒಳ ಮೀಸಲಾತಿಯ ಬಿಂದುಗಳು	ಪ.ಜಾತಿ ಪ್ರವರ್ಗ	400 ರೋಸ್ಟರ್ ಬಿಂದುಗಳಲ್ಲಿ ಪ.ಜಾತಿಗೆ ಲಭ್ಯವಾಗುವ ಬಿಂದುಗಳು	ಒಳ ಮೀಸಲಾತಿಯ ಬಿಂದುಗಳು	ಪ.ಜಾತಿ ಪ್ರವರ್ಗ	400 ರೋಸ್ಟರ್ ಬಿಂದುಗಳಲ್ಲಿ ಪ.ಜಾತಿಗೆ ಲಭ್ಯವಾಗುವ ಬಿಂದುಗಳು	ಒಳ ಮೀಸಲಾತಿಯ ಬಿಂದುಗಳು	ಪ.ಜಾತಿ ಪ್ರವರ್ಗ	400 ರೋಸ್ಟರ್ ಬಿಂದುಗಳಲ್ಲಿ ಪ.ಜಾತಿಗೆ ಲಭ್ಯವಾಗುವ ಬಿಂದುಗಳು	ಒಳ ಮೀಸಲಾತಿಯ ಬಿಂದುಗಳು	ಪ.ಜಾತಿ ಪ್ರವರ್ಗ
1	1	ಪ.ಜಾತಿ (ಪ್ರ-ಎ)	101	16	ಪ.ಜಾತಿ (ಪ್ರ-ಎ)	201	31	ಪ.ಜಾತಿ (ಪ್ರ-ಬಿ)	301	46	ಪ.ಜಾತಿ (ಪ್ರ-ಸಿ)
9	2	ಪ.ಜಾತಿ (ಪ್ರ-ಬಿ)	109	17	ಪ.ಜಾತಿ (ಪ್ರ-ಬಿ)	209	32	ಪ.ಜಾತಿ (ಪ್ರ-ಸಿ)	309	47	ಪ.ಜಾತಿ (ಪ್ರ-ಎ)
15	3*	ಪ.ಜಾತಿ (ಪ್ರ-ಸಿ)*	115	18	ಪ.ಜಾತಿ (ಪ್ರ-ಎ)	215	33	ಪ.ಜಾತಿ (ಪ್ರ-ಎ)	315	48	ಪ.ಜಾತಿ (ಪ್ರ-ಬಿ)
23	4	ಪ.ಜಾತಿ (ಪ್ರ-ಎ)	123	19	ಪ.ಜಾತಿ (ಪ್ರ-ಬಿ)	223	34	ಪ.ಜಾತಿ (ಪ್ರ-ಬಿ)	323	49	ಪ.ಜಾತಿ (ಪ್ರ-ಸಿ)
27	5	ಪ.ಜಾತಿ (ಪ್ರ-ಬಿ)	127	20*	ಪ.ಜಾತಿ (ಪ್ರ-ಸಿ)*	227	35	ಪ.ಜಾತಿ (ಪ್ರ-ಎ)	327	50	ಪ.ಜಾತಿ (ಪ್ರ-ಎ)
33	6	ಪ.ಜಾತಿ (ಪ್ರ-ಸಿ)	133	21	ಪ.ಜಾತಿ (ಪ್ರ-ಎ)	233	36	ಪ.ಜಾತಿ (ಪ್ರ-ಬಿ)	333	51	ಪ.ಜಾತಿ (ಪ್ರ-ಬಿ)
41	7	ಪ.ಜಾತಿ (ಪ್ರ-ಎ)	141	22	ಪ.ಜಾತಿ (ಪ್ರ-ಬಿ)	241	37*	ಪ.ಜಾತಿ (ಪ್ರ-ಸಿ)*	341	52	ಪ.ಜಾತಿ (ಪ್ರ-ಎ)
49	8	ಪ.ಜಾತಿ (ಪ್ರ-ಬಿ)	149	23	ಪ.ಜಾತಿ (ಪ್ರ-ಸಿ)	249	38	ಪ.ಜಾತಿ (ಪ್ರ-ಎ)	349	53	ಪ.ಜಾತಿ (ಪ್ರ-ಬಿ)
53	9	ಪ.ಜಾತಿ (ಪ್ರ-ಸಿ)	153	24	ಪ.ಜಾತಿ (ಪ್ರ-ಎ)	253	39	ಪ.ಜಾತಿ (ಪ್ರ-ಬಿ)	353	54*	ಪ.ಜಾತಿ (ಪ್ರ-ಸಿ)*
59	10	ಪ.ಜಾತಿ (ಪ್ರ-ಎ)	159	25	ಪ.ಜಾತಿ (ಪ್ರ-ಬಿ)	259	40	ಪ.ಜಾತಿ (ಪ್ರ-ಸಿ)	359	55	ಪ.ಜಾತಿ (ಪ್ರ-ಎ)
67	11	ಪ.ಜಾತಿ (ಪ್ರ-ಬಿ)	167	26	ಪ.ಜಾತಿ (ಪ್ರ-ಸಿ)	267	41	ಪ.ಜಾತಿ (ಪ್ರ-ಎ)	367	56	ಪ.ಜಾತಿ (ಪ್ರ-ಬಿ)
75	12	ಪ.ಜಾತಿ (ಪ್ರ-ಸಿ)	175	27	ಪ.ಜಾತಿ (ಪ್ರ-ಎ)	275	42	ಪ.ಜಾತಿ (ಪ್ರ-ಬಿ)	375	57	ಪ.ಜಾತಿ (ಪ್ರ-ಸಿ)
81	13	ಪ.ಜಾತಿ (ಪ್ರ-ಎ)	181	28	ಪ.ಜಾತಿ (ಪ್ರ-ಬಿ)	281	43	ಪ.ಜಾತಿ (ಪ್ರ-ಸಿ)	381	58	ಪ.ಜಾತಿ (ಪ್ರ-ಎ)
89	14	ಪ.ಜಾತಿ (ಪ್ರ-ಬಿ)	189	29	ಪ.ಜಾತಿ (ಪ್ರ-ಸಿ)	289	44	ಪ.ಜಾತಿ (ಪ್ರ-ಎ)	389	59	ಪ.ಜಾತಿ (ಪ್ರ-ಬಿ)
93	15	ಪ.ಜಾತಿ (ಪ್ರ-ಸಿ)	193	30	ಪ.ಜಾತಿ (ಪ್ರ-ಎ)	293	45	ಪ.ಜಾತಿ (ಪ್ರ-ಬಿ)	393	60	ಪ.ಜಾತಿ (ಪ್ರ-ಸಿ)

ಅನುಬಂಧ-2

ಪರಿಶಿಷ್ಟ ಜಾತಿಗೆ 3ಕ್ಕಿಂತ ಹೆಚ್ಚು ಹುದ್ದೆಗಳು ಲಭ್ಯವಿದ್ದಲ್ಲಿ ಅನುಸರಿಸಬೇಕಾದ ರೋಸ್ಟರ್ ಬಿಂದುಗಳು

***ಪರಿಶಿಷ್ಟ ಜಾತಿ ಪ್ರವರ್ಗ-ಸಿ** ಗೆ ಲಭ್ಯವಾಗುವ ಹುದ್ದೆಗಳಲ್ಲಿ ಶೇ. 20ರಷ್ಟು ಹುದ್ದೆಗಳನ್ನು ಪರಿಶಿಷ್ಟ ಜಾತಿಯ ಪ್ರವರ್ಗ-ಸಿ ಯಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸುವುದು. ಒಂದು ವೇಳೆ, ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದಿದ್ದಲ್ಲಿ, ಈ ಹುದ್ದೆಗಳನ್ನು ಪ್ರವರ್ಗ " ಸಿ" ಯ ಇತರೆ ಜಾತಿಗಳ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು.

ಪರಿಶಿಷ್ಟಜಾತಿ ಪ್ರವರ್ಗ –ಎ (5.25%) - 21

ಪರಿಶಿಷ್ಟಜಾತಿ ಪ್ರವರ್ಗ- ಬಿ (5.25%) - 21

ಪರಿಶಿಷ್ಟಜಾತಿ ಪ್ರವರ್ಗ- ಸಿ (4.5%) - 18 (ಶೇ. 20ರಂತೆ 4 ಹುದ್ದೆಗಳನ್ನು 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಿದೆ.)

ಒಟ್ಟು (15%) - 60 ಬಿಂದುಗಳು

PR-172

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ 17 ರಿಂದ ಶೇ15ಕ್ಕೆ ಸೀಮಿತ ಗೊಳಿಸಿ ಒಳಮೀಸಲಾತಿ ಜಾರಿಗೊಳಿಸುವ ಬಗ್ಗೆ.

ಓದಲಾಗಿದ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2026, ದಿನಾಂಕ 27.04.2026
2. ಸರ್ಕಾರದ ಆದೇಶ ಸಂಖ್ಯೆ: ಸಕಇ 515 ಪಕವಿ 2026, ದಿನಾಂಕ 08.05.2026

ಪ್ರಸ್ತಾವನೆ:

1. ಮೇಲೆ ಓದಲಾದ ದಿನಾಂಕ 27.04.2026ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 200448/2025ರಲ್ಲಿ ನೀಡಿರುವ ಮಧ್ಯಂತರ ಆದೇಶದ ಹಿನ್ನಲೆಯಲ್ಲಿ, ಈಗಾಗಲೇ ದಿನಾಂಕ:26.02.2026ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ದಿನಾಂಕ:20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995ರನ್ವಯ 50% ಮೀಸಲಾತಿ ಪ್ರಮಾಣವನ್ನು ತಾತ್ಕಾಲಿಕವಾಗಿ ಅಳವಡಿಸಿಕೊಂಡು, ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು, ನೇಮಕಾತಿ ಮುಂದುವರೆಸಲು ನಿರ್ಧರಿಸಿರುವುದರಿಂದ, ಅದರಂತೆ ನೇಮಕಾತಿ ಹಾಗೂ ಪ್ರವೇಶಾತಿಗಳಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಶೇಕಡಾ 15 ಮೀಸಲಾತಿಯಲ್ಲಿ ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿ ಗಳಿಗೆ ಒಳಮೀಸಲಾತಿಯನ್ನು ಕ್ರಮವಾಗಿ 5.25, 5.25, 4.5 ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಹಾಗೂ ಈ ಮೀಸಲಾತಿ ಪ್ರಮಾಣವನ್ನು ಅನುಷ್ಠಾನಗೊಳಿಸಲು 400 ಬಿಂದುಗಳ ವರ್ತುಲಗಳನ್ನು ಅನುಪಾಲಿಸಲು ತಿಳಿಸಲಾಗಿರುತ್ತದೆ.
2. ದಿನಾಂಕ 30.04.2026ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ದಿನಾಂಕ 24.04.2026ರ ಸಚಿವ ಸಂಪುಟದ ನಿರ್ಣಯದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2026, ದಿನಾಂಕ 27.04.2026ನ್ನು ಹಿಂಪಡೆದು, ಸೂಕ್ತ ಆದೇಶವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸುವುದೆಂದು ನಿರ್ಣಯಿಸಲಾಗಿದ್ದು, ಮೇಲೆ (2) ರಲ್ಲಿ ಓದಲಾದ ದಿನಾಂಕ 08.05.2026ರ ಸರ್ಕಾರದ ಆದೇಶವನ್ನು ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026,

ಬೆಂಗಳೂರು, ದಿನಾಂಕ:13.05.2026

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2026, ದಿನಾಂಕ 27.04.2026ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಆಶಾ ಕುಮಾರಿ ಎ. ಜೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

PR-173

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಶೇಷಾದ್ರಿಪುರ, ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ 27(ಎ)ರಡಿ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಕಛೇರಿಯ ಏಕ ಕಡತ ಸಂಖ್ಯೆ:RCS/SOR/SOR2/33/2025-SOR (2103353).
2. ಸರ್ಕಾರದ ನೋಟೀಸ್ ಸಂಖ್ಯೆ:ಸಿಒ 69 ಸಿಎಸ್ಆರ್ 2026, ದಿನಾಂಕ:27.03.2026.
3. ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಬಡಗನಾಡು ಬ್ರಾಹ್ಮಣ ಮಹಾಸಭಾ, ಬೆಂಗಳೂರು ಇವರ ಸಮಜಾಯಿಷಿ ದಿನಾಂಕ:06.04.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1) ರ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಏಕ ಕಡತದಲ್ಲಿ ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು, ಈ ಸಂಘದಲ್ಲಿ ಅವ್ಯವಹಾರಗಳು ನಡೆಯುತ್ತಿರುವುದಾಗಿ ಶ್ರೀ ಎಲ್.ಮುರಳಿ ಮೋಹನ ಮತ್ತು ಶ್ರೀ ಜಿ.ಆರ್.ಪ್ರಕಾಶ್ ಇವರು ದೂರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿನ ಅಂಶಗಳ ಕುರಿತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ವಿಚಾರಣೆ ಜರುಗಿಸಲು ಶ್ರೀ ಮುರಳಿಧರ, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದ್ದು, ವಿಚಾರಣಾಧಿಕಾರಿಗಳು ವಿಚಾರಣಾ ವರದಿಯಲ್ಲಿ 08 ವಿಚಾರಣಾಂಶಗಳ ಪೈಕಿ ಒಟ್ಟು 07 ಆರೋಪಗಳು ಸಾಬೀತಾಗಿದೆಯೆಂದು ಹಾಗೂ ಸಂಘದ ಕಾರ್ಯಕಾರಿ ಮಂಡಲಿಯ ಅವಧಿಯು ಡಿಸೆಂಬರ್ 2025 ರ ಅಂತ್ಯಕ್ಕೆ ಮುಕ್ತಾಯವಾಗಿರುವುದಾಗಿ, ಹಾಗೂ ತಹಲ್ವರೆಗೆ ಸಂಘಕ್ಕೆ ಚುನಾವಣೆ ಜರುಗಿಸಲು ಕ್ರಮವಿಡದೆ ಬೈಲಾ ಉಲ್ಲಂಘನೆ ಮಾಡಿರುವುದರಿಂದ ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು ಈ ಸಂಘದ ಹಿತದೃಷ್ಟಿಯಿಂದ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ(2) ರನ್ವಯ ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು, ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು?

ಎಂಬ ಬಗ್ಗೆ ನೋಟೀಸ್ ನೀಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ಈಗಾಗಲೇ ಶ್ರೀ ಹರೀಶ್ ಕುಮಾರ್ ಬಿ.ಎಸ್. ರವರನ್ನು ಚುನಾವಣಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಇಲಾಖೆಯಿಂದ ನೇಮಿಸಿರುತ್ತಾರೆ. ಆದ ಕಾರಣ ಈ ಸಂಧರ್ಭದಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಅನುಚಿತವಲ್ಲವೆಂದು ಪರಿಗಣಿಸಿ, ಸಂಘದ ಚುನಾವಣೆ ನಡೆಸಲು ಅನುಮತಿ ನೀಡಲು ಕೋರಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು, ಈ ಸಂಘದ ವಿರುದ್ಧ ಸಲ್ಲಿಸಿರುವ ದೂರನ್ನು ಕಲಂ 25 ರಡಿ ವಿಚಾರಣೆ ಜರುಗಿಸಿ, ವಿಚಾರಣಾ ವರದಿಯಲ್ಲಿ 07 ಆರೋಪಗಳು ಸಾಬೀತಾಗಿರುವುದರಿಂದ ಹಾಗೂ ಸಂಘದ ಕಾರ್ಯಕಾರಿ ಮಂಡಲಿಯ ಅವಧಿಯ ಡಿಸೆಂಬರ್ 2025 ರ ಅಂತ್ಯಕ್ಕೆ ಮುಕ್ತಾಯವಾಗಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ)ರನ್ವಯ ಆಡಳಿತಾಧಿಕಾರಿಯನ್ನಾಗಿ ಶ್ರೀ ಎನ್.ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 2ನೇ ವಲಯ, ಬೆಂಗಳೂರು ಇವರನ್ನು ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 69 ಸಿಎಸ್‌ಆರ್ 2026

ಬೆಂಗಳೂರು, ದಿನಾಂಕ: 05ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಬಡಗನಾಡು ಬ್ರಾಹ್ಮಣ ಮಹಾಸಭಾ, ನಂ.20/1, ಬಡಗನಾಡು ಸಂಘ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನಾಗಿ ಶ್ರೀ ಎನ್.ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 2ನೇ ವಲಯ, ಬೆಂಗಳೂರು ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-174

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಭದ್ರಾವತಿ ತಾಲ್ಲೂಕು ಗಂಗಾಮತಸ್ಥರ ಸಂಘ, ಭದ್ರಾವತಿ ಈ ಸಂಘಕ್ಕೆ ನೇಮಿಸಿರುವ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :- 1. ಸರ್ಕಾರದ ಆದೇಶ ಸಂಖ್ಯೆ:ಸಿಒ 86 ಸಿಎಸ್ಆರ್ 2024, ದಿನಾಂಕ:25.09.2025.

2. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಡಿಆರ್ಎಸ್/ ಎಸ್ಓಆರ್/ ಆ.ನೇ/ ಸಿಆರ್-51/ 2025-26/1774, ದಿನಾಂಕ:23.03.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಭದ್ರಾವತಿ ತಾಲ್ಲೂಕು ಗಂಗಾ ಮತಸ್ಥರ ಸಂಘ,(ನೋಂದಣಿ ಸಂಖ್ಯೆ:157/2001-02), ಸಿ.ಎನ್ ರಸ್ತೆ, ಭದ್ರಾವತಿ ಈ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಭದ್ರಾವತಿ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಭದ್ರಾವತಿ ತಾಲ್ಲೂಕು ಗಂಗಾಮತಸ್ಥರ ಸಂಘ, ಭದ್ರಾವತಿ ಈ ಸಂಘದಲ್ಲಿ ಸದಸ್ಯರ ವಹಿ ನಿರ್ವಹಿಸಿರುವುದಿಲ್ಲ. ಆದ್ದರಿಂದ ಷೇರು ರಶೀದಿಯ ಪುಸ್ತಕದ ಆಧಾರದ ಮೇಲೆ 646 ಜನ ಸದಸ್ಯರ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಸದರಿ ಷೇರುದಾರರ ತಂದೆ/ಗಂಡನ ಹೆಸರು ವಿಳಾಸ ಲಭ್ಯವಿಲ್ಲದ ಕಾರಣ ಸದಸ್ಯರ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವಾಗದ ಕಾರಣ ಸಂಘದ ಆಡಳಿತ ಮಂಡಳಿ ಚುನಾವಣೆಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ಆಡಳಿತಾಧಿಕಾರಿಯವರು ವರದಿ ಮಾಡಿರುವುದಾಗಿ ತಿಳಿಸಿ, ಸಂಘದ ಕಾರ್ಯಕಾರಿ ಮಂಡಳಿ ಚುನಾವಣೆ ನಡೆಸಲು ಕಾಲಾವಕಾಶದ ಅಗತ್ಯವಿರುವುದರಿಂದ ಅಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:25-03-2026 ರಿಂದ ಮುಂದಿನ 06 ತಿಂಗಳವರೆಗೆ ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:24.03.2026ಕ್ಕೆ ಮುಕ್ತಾಯಗೊಂಡಿರುವುದರಿಂದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯವರು ಕೋರಿರುವಂತೆ

ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:25.03.2026 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 86 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 05ನೇ ಮೇ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯೆ 1960ರ ಕಲಂ 27-ಎ ರನ್ವಯ ಭದ್ರಾವತಿ ತಾಲ್ಲೂಕು ಗಂಗಾ ಮತಸ್ಥರ ಸಂಘ,(ನೋಂದಣಿ ಸಂಖ್ಯೆ:157/2001-02), ಸಿ.ಎನ್ ರಸ್ತೆ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:25.03.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-175

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ರಾಜ್ಯ ಸವಿತಾ ಸಮಾಜ, ನಂ.21, ಸವಿತಾ ಭವನ, ಜರ್ನಲಿಸ್ಟ್ ಕಾಲೋನಿ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಇ 129 ಸಸಂನೋ 2016, ದಿನಾಂಕ: 02.04.2024, 07.12.2024, 23.04.2025 ಮತ್ತು 05.11.2025.
2. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂ: ಡಿಆರ್‌ಬಿ-2/ಸಂ.ಸಂ/ಆ.ನೇ/01/2018-19, ದಿನಾಂಕ:13.02.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಸವಿತಾ ಸಮಾಜ, ಬೆಂಗಳೂರು ಈ ಸಂಘಕ್ಕೆ ಶ್ರೀ ಹರೀಶ್ ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ,

ಆನೇಕಲ್ ಇವರನ್ನು ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು. ನಂತರ ಕಾಲಕಾಲಕ್ಕೆ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:6455/2025ರ ಆದೇಶದಂತೆ ಸಂಘದ 2003ರ ಬೈಲಾ ರೀತ್ಯ ಚುನಾವಣೆಯನ್ನು ನಡೆಸಲು ಮತದಾರರ ಪಟ್ಟಿ ಸಿದ್ಧ ಪಡಿಸಬೇಕಾಗಿರುವುದರಿಂದ ತಾಲ್ಲೂಕು, ಜಿಲ್ಲಾವಾರು ಮತದಾರರ ಪಟ್ಟಿ ತಯಾರಿಸಲು ಹಾಗೂ ಚುನಾವಣೆ ನಡೆಸಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವ ಹಿನ್ನಲೆಯಲ್ಲಿ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:02.04.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:01.04.2026ಕ್ಕೆ ಮುಕ್ತಾಯಗೊಂಡಿರುವುದರಿಂದ ಉಪ ನಿಬಂಧಕರ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯ ಸವಿತಾ ಸಮಾಜ, ನಂ.21, ಸವಿತಾ ಭವನ, ಜರ್ನಲಿಸ್ಟ್ ಕಾಲೋನಿ, ಬೆಂಗಳೂರು ಈ ಸಂಘದ ಚುನಾವಣೆ ನಡೆಸಲು ಆಡಳಿತಾಧಿಕಾರಿಯ ಅವಧಿಯನ್ನು ಅಂತಿಮವಾಗಿ ದಿನಾಂಕ:02.04.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 109 ಸಿಎಸ್‌ಆರ್ 2025,

ಬೆಂಗಳೂರು, ದಿನಾಂಕ: 02ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕರ್ನಾಟಕ ರಾಜ್ಯ ಸವಿತಾ ಸಮಾಜ, ನಂ.21, ಸವಿತಾ ಭವನ, ಜರ್ನಲಿಸ್ಟ್ ಕಾಲೋನಿ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ಅಂತಿಮವಾಗಿ ದಿನಾಂಕ:02.04.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಮಾಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)

ಸರ್ಕಾರದ ಅಧೀನ ಕಾರ್ಯದರ್ಶಿ-3,

ಸಹಕಾರ ಇಲಾಖೆ.

PR-176

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವರ ಸಂಘ, ವಾಮಂಜೂರು, ಮಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ:ಸಿಒ 111 ಸಿಎಸ್ಆರ್ 2025, ದಿನಾಂಕ:09.09.2025.
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಂಗಳೂರು ಉಪ ವಿಭಾಗ, ಮಂಗಳೂರು ಹಾಗೂ ಆಡಳಿತಾಧಿಕಾರಿ, ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವರ ಸಂಘ, ವಾಮಂಜೂರು, ಮಂಗಳೂರು ಇವರ ಪತ್ರ ಸಂಖ್ಯೆ:ಎಆರ್ 36: ಎಸ್2: ಎಸ್ಎಸ್ಎನ್: 2025-26, ದಿನಾಂಕ:10.03.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರ ಆದೇಶಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವರ ಸಂಘ, ತಿರುವೈಲು ಗ್ರಾಮ, ವಾಮಂಜೂರು ಪೋಸ್ಟ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ನೋಂ.ಸಂ:144/1993-94) ಈ ಸಂಘಕ್ಕೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಗಳೂರು ಉಪವಿಭಾಗ, ಮಂಗಳೂರು ಇವರನ್ನು 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಬಿಲ್ಲವರ ಸಂಘ, ವಾಮಂಜೂರು, ಮಂಗಳೂರು ಈ ಸಂಘದ ಪ್ರಭಾರವನ್ನು ದಿನಾಂಕ:16.09.2025ರಂದು ವಹಿಸಿಕೊಂಡಿದ್ದು, ಹಿಂದಿನ ಆಡಳಿತ ಮಂಡಳಿ ಸದಸ್ಯರುಗಳಾದ ಶ್ರೀ ಕಾಂತಪ್ಪ ಪೂಜಾರಿ, ಶ್ರೀ ಬಾಲಕೃಷ್ಣ ಎಸ್ ಕರ್ಕೇರ, ಶ್ರೀ ಜಿ.ಕೃಷ್ಣ ಕೋಟ್ಯಾನ್, ಶ್ರೀ ಯೋಗಿಶ್ ಸುವರ್ಣ,ಶ್ರೀ ಕಿಶೋರ್ ಕುಮಾರ್, ಶ್ರೀ ಐತಪ್ಪ ಪೂಜಾರಿ ಇವರುಗಳಿಗೆ ದಿನಾಂಕ:19.01.2026ರ ನೋಟೀಸ್ ಮೂಲಕ ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವರ ಸಂಘ, ವಾಮಂಜೂರು, ಮಂಗಳೂರು ಇದಕ್ಕೆ ಸಂಬಂಧಿಸಿದ ಸಂಪೂರ್ಣ ದಾಖಲಾತಿಗಳನ್ನು ಆಡಳಿತಾಧಿಕಾರಿಗೆ ವಹಿಸಲು ತಿಳಿಸಲಾಗಿತ್ತು. ಅದರೆ ಸದರಿಯವರು ಮಾನ್ಯ ಉಚ್ಚ ನ್ಯಾಯಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:10602/2025ನ್ನು ದಾಖಲಿಸಿದ್ದು, ದಿನಾಂಕ:02.12.2026ರಲ್ಲಿ "The rights of the parties would have to be ascertained and determined in O.S. NO.1343 of 2025, which is pending between the parties" ಎಂದು ಆದೇಶಿಸಿದ್ದು, ಸಂಘದ ಆಡಳಿತ ಮಂಡಳಿಯವರು ಸಂಘದ ದಾಖಲಾತಿಗಳನ್ನು ನೀಡದ ಕಾರಣ ಹಾಗೂ O.S.NO.1343/2025 ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವ ಹಿನ್ನಲೆಯಲ್ಲಿ ಆಡಳಿತಾಧಿಕಾರಿ ಅವಧಿಯನ್ನು 6 ತಿಂಗಳಿಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:08.03.2026ಕ್ಕೆ ಮುಕ್ತಾಯಗೊಂಡಿರುವುದರಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಗಳೂರು ಉಪ ವಿಭಾಗ, ಮಂಗಳೂರು ಹಾಗೂ ಆಡಳಿತಾಧಿಕಾರಿ, ಬ್ರಹ್ಮಶ್ರೀ

ನಾರಾಯಣ ಗುರು ಬಿಲ್ಲವರ ಸಂಘ, ವಾಮಂಜೂರು, ಮಂಗಳೂರು ಇವರು ಕೋರಿರುವಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:09.03.2026 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 111 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ: 05ನೇ ಮೇ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವರ ಸಂಘ, ತಿರುವೈಲು ಗ್ರಾಮ, ವಾಮಂಜೂರು ಪೋಸ್ಟ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ನೋಂ.ಸಂ:144/1993-94) ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:09.03.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-177

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ, ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ 27(ಎ)ರಡಿ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್.ಸಿ.ಎಸ್:ಜಂ.ನಿ/ಐಸಿಡಿಪಿ/ಸಂ.ಸಂ-04/ಆ.ನೇ:07:2023-24, ದಿನಾಂಕ:12.11.2024.
2. ಸರ್ಕಾರದ ನೋಟೀಸ್ ಸಂಖ್ಯೆ:ಸಿಒ 276 ಸಿಎಸ್‌ಆರ್ 2024, ದಿನಾಂಕ:30.11.2024.
3. ಅಧ್ಯಕ್ಷರು, ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ ಇವರ ಸಮಜಾಯಿಷಿ ದಿನಾಂಕ:21.12.2024.
4. ಸರ್ಕಾರದ ಪತ್ರ ಸಂಖ್ಯೆ: ಸಿಒ 276 ಸಿಎಸ್‌ಆರ್ 2024, ದಿನಾಂಕ: 15.09.2025.
5. ಸಹಕಾರ ಸಂಘಗಳ ಉಪ ನಿಬಂದಕರು, ಯಾದಗಿರಿ ಜಿಲ್ಲೆ ಇವರ ಕಛೇರಿಯ ಪತ್ರ ಸಂಖ್ಯೆ:ಉನಿಯಾ/ವಿ3/ನವೀಕರಣ/2024-25/1263, ದಿನಾಂಕ:02.03.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ ಈ ಸಂಘದ ವಿರುದ್ಧದ

ದೂರರ್ಜಿಯನ್ನು ಪರಿಶೀಲಿಸಲಾಗಿದ್ದು, ಸದರಿ ಸಂಘದ ಉಪ ನಿಯಮ 9(2)ರನ್ವಯ ಪದಾಧಿಕಾರಿಗಳ ಅಧಿಕಾರಾವದಿ ಹಾಗೂ ಕಾರ್ಯನಿರ್ವಾಹಕರ ಕಾರ್ಯಾವದಿಯು 10ವರ್ಷಗಳಾಗಿದ್ದು, ಸಂಘದಲ್ಲಿ ಎರಡು ಬಣಗಳಿದ್ದು, ಮಾನ್ಯ ಜೆ.ಎಂ.ಎಫ್.ಸಿ ಅಡಿಷನಲ್ ಸಿವಿಲ್ ನ್ಯಾಯಾಲಯ ಶಹಾಪೂರ ಇದರ ಆದೇಶದಂತೆ ಸಂಘವು ಕ್ರಮವಹಿಸದೇ ಇರುವುದರಿಂದ ಸಂಘದ ವಿರುದ್ದ ಪದೇಪದೇ ದೂರುಗಳು ಸ್ವೀಕೃತವಾಗುತ್ತಿದ್ದು, 2014ನೇ ಸಾಲಿನಿಂದ ಇಲ್ಲಿಯವರೆಗೂ ಸಂಘವು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ಹಾಗೂ ಸಂಘವು ಹೊಂದಿರುವ ಆಸ್ತಿಯನ್ನು ಪಾಲನೆ ಮಾಡಲು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ(2) ರನ್ವಯ ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ನೋಟೀಸ್ ನೀಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ, ಸಂಘದ ಅಧ್ಯಕ್ಷರು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ಸಂಘದ ಚುನಾವಣೆಯು ದಿನಾಂಕ:22.06.2014ರಲ್ಲಿ ನಡೆದಿದ್ದು, ಸಂಘದ ಬೈಲಾದ ನಿಯಮ ಸಂಖ್ಯೆ.9(2)ರಂತೆ 10 ವರ್ಷದ ಅವಧಿಗೆ ಆಯ್ಕೆಯಾಗಿದ್ದು, ಈ ಮಧ್ಯೆ ಶ್ರೀ ರಾಜು ಎಂಬುವರು ಅಧಿಕಾರವಿಲ್ಲದಿದ್ದರೂ ಸಂಘದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಸಂಘದ ಸಮಿತಿಯ ಅವಧಿಯು ಕೇವಲ ಮೂರು ವರ್ಷಗಳೆಂದು, ಸಂಘದ ಆಡಳಿತ ನಡೆಸಲು ಸಮಿತಿಗೆ ಅಧಿಕಾರವಿಲ್ಲವೆಂದು ದೂರಿದ್ದು, ಅದರಂತೆ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.ಸಂ.188/2017ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಶ್ರೀ ರಾಜು ರವರಿಗೆ ಸಂಘದ ಆಡಳಿತದಲ್ಲಿ ಹಸ್ತಕ್ಷೇಪ ಮಾಡದಂತೆ ದಿನಾಂಕ:16.07.2019ರ ಆದೇಶದಲ್ಲಿ ನಿರ್ದೇಶಿಸಿದ್ದು, ಸದರಿ ಆದೇಶಕ್ಕೆ ಮೇಲ್ಮನವಿ ಸಲ್ಲಿಸಲಾಗಿದ್ದು, ಸದರಿ ಮೇಲ್ಮನವಿಯು ವಜಾಗೊಂಡಿರುತ್ತದೆಂದು, ಒ.ಎಸ್.ಸಂ.188/2017ರ ಪ್ರಕರಣವು ಇತ್ಯರ್ಥಕ್ಕೆ ಬಾಕಿಯಿರುವುದರಿಂದ ಪ್ರಸ್ತುತ ಇರುವ ಕಾರ್ಯಕಾರಿ ಸಮಿತಿಯ ಸ್ಥಾನದಲ್ಲಿ ಆಡಳಿತಾಧಿಕಾರಿಯನ್ನು ನೇಮಿಸದಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ(4)ರ ಪತ್ರದಲ್ಲಿ ಅಧ್ಯಕ್ಷರು, ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ, ಇವರ ಲಿಖಿತ ಹೇಳಿಕೆಯನ್ನು ಸಹಕಾರ ಸಂಘಗಳ ಉಪ ನಿಬಂಧಕರು, ಯಾದಗಿರಿ ಜಿಲ್ಲೆ ಇವರಿಗೆ ಕಳುಹಿಸಿ ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡುವಂತೆ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಸಂಘದ ಅಧಿಕಾರ ಅವಧಿಯು ಮುಕ್ತಾಯಗೊಂಡಿದ್ದು, ಸಂಘದ ಬೈಲಾ ಉಲ್ಲಂಘನೆಯಾಗಿದ್ದು, ಸಂಘದ ಹೆಸರಿನಲ್ಲಿ ಆಸ್ತಿ ಇದ್ದು ಸದರಿ ಸಂಘದ ದೈನಂದಿನ ಕಾರ್ಯಚಟುವಟಿಕೆಗಳು ಹಾಗೂ ಲೆಕ್ಕ ಪತ್ರ ಸಮನ್ವಯ ಮಾಡಲು ಮತ್ತು ಸಂಘದ ಚುನಾವಣೆ ಮಾಡುವ ಹಿತದೃಷ್ಟಿಯಿಂದ ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೊಂದಣಿ ಅಧಿನಿಯಮ 1960ರ ಕಲಂ-27ಎ ರನ್ವಯ ಆಡಳಿತಾಧಿಕಾರಿ ನೇಮಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯದ ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ಉಪ ನಿಬಂಧಕರು, ಯಾದಗಿರಿ ಜಿಲ್ಲೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ ಈ ಸಂಘಕ್ಕೆ ಶ್ರೀ ಶೇಖ ತಖಿವುದ್ದಿನ, ಪ್ರಭಾರಿ ಸಹಕಾರ ವಿಸ್ತರಣಾಧಿಕಾರಿ, ಶಹಾಪೂರ, ಯಾದಗಿರಿ ಜಿಲ್ಲೆ ಇವರನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರನ್ವಯ 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 276 ಸಿಎಸ್‌ಆರ್ 2024
ಬೆಂಗಳೂರು, ದಿನಾಂಕ:21ನೇ ಏಪ್ರಿಲ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಶ್ರೀ ಜಿಹ್ವೇಶ್ವರ ಸ್ವಕುಳ ಸಾಳಿ ಸಮಾಜ(ರಿ), ಶಹಾಪೂರ, ಯಾದಗಿರಿ ಜಿಲ್ಲೆ ಈ ಸಂಘಕ್ಕೆ ಶ್ರೀ ಶೇಖ ತಖಿವುದ್ದಿನ, ಪ್ರಭಾರಿ ಸಹಕಾರ ವಿಸ್ತರಣಾಧಿಕಾರಿ, ಶಹಾಪೂರ, ಯಾದಗಿರಿ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-178

ಕರ್ನಾಟಕ ಸರ್ಕಾರದ ನಡವಳಿ

ವಿಷಯ: ವಿಕಲಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ (Rights of Persons with Disabilities Act, 2016) 37 ರ ಪ್ರಕಾರ, ವಿಕಲಚೇತನ ಹೊಂದಿದವರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಭೂಮಿ ಹಂಚಿಕೆಯಲ್ಲಿ ವಿನಾಯಿತಿ ನೀಡುವ ಕುರಿತು.

ಓದಲಾಗಿದೆ:

1) ವಿಕಲಚೇತನರ ಹಕ್ಕುಗಳ ಕಾಯ್ದೆ 2016 ರ ಕಲಂ 37.
2) ಸರ್ಕಾರದ ಆದೇಶ ಸಂಖ್ಯೆ: CI 82 CSC 2016, ದಿನಾಂಕ 05-05-2016.
3) ಆರ್ಥಿಕ ಇಲಾಖೆಯ ದಿನಾಂಕ 27.10.2025 ರ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರಲ್ಲಿನ The Rights of Persons with Disabilities Act, 2016 ರ ಕಲಂ 37 ರಲ್ಲಿ ಕೆಳಕಂಡಂತೆ ತಿಳಿಸಲಾಗಿದೆ:

37) Special Schemes and development programmes - the appropriate Government and the local authorities shall, by notification, make schemes in favour of persons with benchmark disabilities, to provide:

i) Five percent Reservation in allotment of agricultural land and housing in all relevant schemes and development programmes, with appropriate priority to women with benchmark disabilities;

ii) Five percent Reservation in all poverty alleviation and various developmental schemes with priority to women with benchmark disabilities;

iii) **Five percent Reservation in allotment of land on concessional rate,** which such land is to be used for the purpose of promoting housing, shelter, setting up of occupation, business, enterprise, recreation centres and production centres.

ಶ್ರೀ ಪ್ರದೀಪ್ ಎಂ., M/s MRR ಮೆಟಲ್ ಇಂಡಸ್ಟ್ರೀಸ್, ಮಾಲೀಕರು, ಮಾನ್ಯ ಉಚ್ಚ ನ್ಯಾಯಲಯದಲ್ಲಿ W.P. ಸಂಖ್ಯೆ 15888/2022 ದಾಖಲಿಸಿ The Rights of Persons with Disabilities Act, 2016 ರ ಕಲಂ 37 ನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (KIADB) ಅನುಸರಿಸುವಂತೆ ಹಾಗೂ ವಿಕಲಚೇತನರಿಗೆ ಮೀಸಲಾತಿ ಮತ್ತು ರಿಯಾಯಿತಿ ನೀಡಲು, ನೀತಿ ರೂಪಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ KIADB/KSSIDC ಕೈಗಾರಿಕಾ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು (Category-1 & 2A), ದೈಹಿಕವಾಗಿ ವಿಕಲಚೇತನ ಹೊಂದಿದವರು ಮತ್ತು ನಿವೃತ್ತ ಸೈನಿಕರಿಗೆ 10% ಜಾಗ/ಶೆಡ್ ಮೀಸಲಾತಿಯನ್ನು ಈಗಾಗಲೇ ನೀಡಲಾಗಿದೆ.

KIADB ಒಂದು ಲಾಭರಹಿತ ಸಂಸ್ಥೆಯಾಗಿರುವುದರಿಂದ, ಭೂಮಿಯ ಮೇಲೆ ರಿಯಾಯಿತಿ ನೀಡಿದ್ದಲ್ಲಿ, ಆ ಮೊತ್ತವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಂಗವೈಕಲ್ಯ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಅಥವಾ ಆರ್ಥಿಕ ಇಲಾಖೆಯು ಮಂಡಳಿಗೆ **ಪುನರ್‌ಪಾವತಿಸುವ ಷರತ್ತಿನ ಮೇರೆಗೆ** ವಿಕಲಚೇತನ ಹೊಂದಿದವರಿಗೆ KIADB ಕೈಗಾರಿಕಾ ಪ್ರದೇಶಗಳಲ್ಲಿ ಶೇ. 50% ರಿಯಾಯಿತಿ ನೀಡುವುದು ಎಂದು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ತೀರ್ಮಾನವನ್ನು ಆರ್ಥಿಕ ಇಲಾಖೆಯು ಒಪ್ಪದೆ, ದಿನಾಂಕ 27.10.2025 ರ ಹಿಂಬರಹದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ:

The proposal of the Administrative Department has been examined. The relevant provision u/s 37 of the Act says “Five percent reservation in allotment of land on concessional rate”.

The intent of the scheme is to provide reservation under the scheme for allotting land on concessional rate. Currently, there is only one scheme under KIADB to allot land under concessional rate, that is for the persons belonging to the SC/ST communities.

Hence, going by the provisions of the Act, FD advises the following approach as the way forward:

- KIADB may provide for a 5% reservation to the persons with disability in its land allotment process. This should be on payment basis;

- Since, KIADB is running a scheme to allot under concessional scheme for SC/ST categories, a reservation of 5% under this category may be provided.

ಪ್ರಸ್ತಾವನೆಯನ್ನು ಕೂಲಕಂಷವಾಗಿ ಪರಿಶೀಲಿಸಿದ್ದು, ಕೆಐಎಡಿಬಿಯು ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶದಲ್ಲಿ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ ಶೇ.30 ರಷ್ಟು ಪ್ರದೇಶವನ್ನು ಹಂಚಿಕೆಗಾಗಿ ಮೀಸಲಿಡಲಾಗುತ್ತಿದೆ. ಸಾಮಾನ್ಯವಾಗಿ ವಿಕಲಚೇತನರು ಸ್ಥಾಪಿಸುವ ಕೈಗಾರಿಕೆಗಳು ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳಾಗಿರುತ್ತವೆ ಎಂಬ ಅಂಶವನ್ನು ಪರಿಗಣಿಸಿ, ಕೈಗಾರಿಕಾ ಪ್ರದೇಶದಲ್ಲಿ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ ಮೀಸಲಿಡುವ ಶೇ.30 ರಷ್ಟು ಪ್ರದೇಶದಲ್ಲಿ ವಿಕಲಚೇತನ ಉದ್ದಿಮೆದಾರರಿಗೆ ಶೇ.5 ರಷ್ಟು ಮೀಸಲಾತಿಯನ್ನು ಒದಗಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಸಿಐ 29 ಎಸ್‌ಪಿಎ 2023
ಬೆಂಗಳೂರು, ದಿನಾಂಕ: 23. 04.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಕಲಚೇತನ ಹೊಂದಿದವರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶದ ಭೂಮಿ ಹಂಚಿಕೆಯಲ್ಲಿ ಕೆಳಕಂಡಂತೆ ಮೀಸಲಾತಿಯನ್ನು ಕಲ್ಪಿಸಿ ಆದೇಶಿಸಿದೆ:

a) ಕೈಗಾರಿಕಾ ಪ್ರದೇಶದಲ್ಲಿ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ ಮೀಸಲಿಡುವ ಶೇ.30ರಷ್ಟು ಪ್ರದೇಶದಲ್ಲಿ ವಿಕಲಚೇತನ ಉದ್ದಿಮೆದಾರರಿಗೆ ಯಾವುದೇ ರಿಯಾಯಿತಿ ಇಲ್ಲದೇ ಶೇ. 5 ರಷ್ಟು ಮೀಸಲಾತಿಯನ್ನು ಕಲ್ಪಿಸುವುದು;

b) ಕೆಐಎಡಿಬಿಯು ಎಸ್‌ಸಿ/ಎಸ್‌ಟಿ ವರ್ಗಗಳಿಗೆ ರಿಯಾಯಿತಿ ಯೋಜನೆಯಡಿ ಹಂಚಿಕೆ ಮಾಡುವ ಯೋಜನೆಯನ್ನು ನಡೆಸುತ್ತಿರುವುದರಿಂದ, ಈ ವರ್ಗದ ಅಡಿಯಲ್ಲಿ ವಿಕಲಚೇತನ ಉದ್ದಿಮೆದಾರರಿಗೆ ಶೇ.5 ರಷ್ಟು ಮೀಸಲಾತಿಯನ್ನು ಒದಗಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ FD 488 Exp-1/2024, ದಿನಾಂಕ 27.10.2025 ರನ್ವಯ ಹೊರಡಿಸಲಾಗಿದೆ.

ಅಲ್ಲದೇ, ಸರ್ಕಾರಿ ಆದೇಶ ಸಂಖ್ಯೆ ಸಿಐ 82 ಸಿಎಸ್‌ಸಿ 2016, ದಿನಾಂಕ 05.05.2016 ರಲ್ಲಿ ವಿಕಲಚೇತನ ಉದ್ದಿಮೆದಾರರಿಗೆ ನೀಡುತ್ತಿರುವ ಮೀಸಲಾತಿಯನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ನದೀಮ್ ಅಹ್ಮದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಕೈ.ಅ)

PR-179

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹೆಚ್ಚುವರಿ ಕಬ್ಬು ಬೆಲೆಯನ್ನು ಪಾವತಿಸುವುದಕ್ಕಾಗಿ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗಳಿಗೆ ಪಾವತಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ: 08.11.2025
2. ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025 (ಭಾಗ-1), ದಿನಾಂಕ:24.02.2026
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ:ಡಿಎಸ್‌ಕೆ/ಎಸ್‌ಜಿಎಫ್/ಅನುದಾನ-01/2025-26, ದಿನಾಂಕ: 25.02.2026, 18.03.2026 ಮತ್ತು 20.03.2026
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎಸ್‌ಜಿಎಫ್/ಅನುದಾನ-01/2025-26/109, ದಿನಾಂಕ:24.04.2026

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ 2025-26ನೇ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯದ ರೈತರಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ ಘೋಷಿಸಿರುವಂತೆ ಪ್ರತಿ ಒಂದು ಮೆ.ಟನ್ ಕಬ್ಬಿಗೆ ರೂ.50.00 ರಂತೆ ಆರ್ಥಿಕ ನೆರವನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ : 2852-08-201-0-07-100- "Special Incentives to Sugarcane Growers - Finance Assistance / Relief" ರಡಿ ರೂ.300.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶಗಳಲ್ಲಿ, ರಾಜ್ಯದ ಸಕ್ಕರೆ ಕಾರ್ಖಾನೆಗಳು ಅರೆದಿರುವ, ಅರೆಯಬಹುದಾದ ಕಬ್ಬಿನ ಪ್ರಮಾಣಕ್ಕೆ ಅನುಗುಣವಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಅನುದಾನವನ್ನು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ, ಮೈಸೂರು, ಮಂಡ್ಯ ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಕಬ್ಬು ಬೆಳೆಗಾರರಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗಿರುತ್ತದೆ.

ಕ್ರ.ಸಂ.	ಜಿಲ್ಲೆಯ ಹೆಸರು	ಹಂಚಿಕೆ ಮಾಡಿದ ಅನುದಾನದ ಮೊತ್ತ (ರೂ.ಗಳಲ್ಲಿ)
1	ಮೈಸೂರು	3,76,16,450.00
2	ಮಂಡ್ಯ	10,04,24,200.00
3	ಹಾಸನ	1,50,01,200.00
4	ಚಾಮರಾಜನಗರ	2,54,56,150.00

ಸರ್ಕಾರವು ಘೋಷಿಸಿರುವಂತೆ ಕಾರ್ಖಾನೆಗಳು ನೀಡಬೇಕಾಗಿರುವ ಹೆಚ್ಚುವರಿ ಕಬ್ಬಿನ ಬೆಲೆಯನ್ನು ಪ್ರಶ್ನಿಸಿ ದಕ್ಷಿಣ ಕರ್ನಾಟಕ ಭಾಗದ 04 ಜಿಲ್ಲೆಗಳಲ್ಲಿರುವ 07 ಸಕ್ಕರೆ ಕಾರ್ಖಾನೆಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 8866/2026 & 9220/2026 ಅನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಸರ್ಕಾರದ ಆದೇಶಕ್ಕೆ ದಿನಾಂಕ:24.03.2026 ರಂದು ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ. ಸಕ್ಕರೆ ಕಾರ್ಖಾನೆಗಳು ಪ್ರತಿ ಮೆಟ್ರಿಕ್ ಟನ್‌ಗೆ ರೂ.50/- ರಂತೆ ಹಾಗೂ ಸರ್ಕಾರದ ಪಾಲನ್ನು ಸೇರಿಸಿ ಒಟ್ಟು ರೂ.100/- ಗಳನ್ನು ರೈತರಿಗೆ ಪಾವತಿಸಬೇಕಿದೆ. ಆದರೆ, ಕಾರ್ಖಾನೆಗಳು ತಮ್ಮ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ರೆಸಿಪಿಯಂಟ್ ಐಡಿ ವಿವರಗಳನ್ನು ಒದಗಿಸಿರುವುದಿಲ್ಲ. ಅನುದಾನ ವ್ಯಪಗತವಾಗುವುದನ್ನು ತಡೆಯಲು ಅನುದಾನವನ್ನು ಜಿಲ್ಲಾಧಿಕಾರಿಗಳ ಪಿಡಿ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲು ಆದೇಶಿಸಲಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8866/2026 ಮತ್ತು 9220/2026ರಲ್ಲಿ ಸರ್ಕಾರದ ಆದೇಶಕ್ಕೆ ನೀಡಿರುವ ಮಧ್ಯಂತರ ತಡೆಯಾಜ್ಞೆ ತೆರವುಗೊಳ್ಳುವವರೆಗೆ ಅಥವಾ ನ್ಯಾಯಾಲಯದ ಪ್ರಕರಣ ಇತ್ಯರ್ಥವಾಗುವವರೆಗೂ ಕಾರ್ಖಾನೆಗಳ ಪಾಲಿನ ಪ್ರತಿ ಮೆ.ಟನ್ ಕಬ್ಬಿನ ಮೊತ್ತ ರೂ.50/- ಗಳಿಗೆ ಕಾಯದೇ, ಈಗಾಗಲೇ ಬಿಡುಗಡೆ ಮಾಡಿರುವ ಸರ್ಕಾರದ ಪಾಲಿನ ಅನುದಾನವನ್ನು ದಕ್ಷಿಣ ಭಾಗದ 08 ಸಕ್ಕರೆ ಕಾರ್ಖಾನೆಗಳಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/-ರಂತೆ ಸಂಬಂಧಪಟ್ಟ ಕಾರ್ಖಾನೆಗಳ ಮೂಲಕವೇ ಕಬ್ಬು ಸರಬರಾಜು ಮಾಡಿದ ರಾಜ್ಯದ ರೈತರಿಗೆ ಪಾವತಿಸಲು ಅನುಮತಿ ನೀಡುವಂತೆ ಆಯುಕ್ತರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025(ಭಾಗ-1)
ಬೆಂಗಳೂರು, ದಿನಾಂಕ: 8ನೇ ಮೇ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8866/2026 ಮತ್ತು 9220/2026ರಲ್ಲಿ ಸರ್ಕಾರದ ಆದೇಶಕ್ಕೆ ನೀಡಿರುವ ಮಧ್ಯಂತರ ತಡೆಯಾಜ್ಞೆ ತೆರವುಗೊಳ್ಳುವವರೆಗೆ ಅಥವಾ ಪ್ರಕರಣ ಇತ್ಯರ್ಥವಾಗುವವರೆಗೂ ಕಾಯದೇ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಈಗಾಗಲೇ 2025-26ನೇ ಹಂಗಾಮಿನಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿರುವ 08 ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪ್ರತಿ ಮೆ.ಟನ್ ಒಂದಕ್ಕೆ ರೂ.50.00 ರಂತೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒದಗಿಸುವುದಕ್ಕಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಸಕ್ಕರೆ ಕಾರ್ಖಾನೆಗಳಿಗೆ ವರ್ಗಾಯಿಸುವಂತೆ ಮತ್ತು ಅಂತಹ ಮೊತ್ತವನ್ನು ಕಬ್ಬು ಸರಬರಾಜು ಮಾಡಿದ ರಾಜ್ಯದ ರೈತರ ಬ್ಯಾಂಕ್ ಖಾತೆಗಳಿಗೆ ಪಾವತಿಸಲು ಸಂಬಂಧಪಟ್ಟ ಸಕ್ಕರೆ ಕಾರ್ಖಾನೆಗಳು ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-180

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH